# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಬಿಡಿ/2117-2021 ಪಿ.ಆರ್.ಇ-1

ಮಂಡನಾಧಿಕಾರಿಗಳ ಶಾಖೆ

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ರಸ್ತೆ,
ಬೆಂಗಳೂರು, ದಿನಾಂಕ: 10-11-2021.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

ವಿಷಯ: ಶ್ರೀ ಆರ್.ಎಸ್.ಪರಮೇಶ್ವರಪ್ಪ, ಅಭಿವೃದ್ದಿ ಅಧಿಕಾರಿ, ಪ್ರಭಾರ ಜಿಲ್ಲಾ ವ್ಯವಸ್ಥಾಪಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ದಿ ನಿಗಮ, ಶಿವಮೊಗ್ಗ– ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

----

1. ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹ ದಳ, ಶಿವಮೊಗ್ಗ, ಶಿವಮೊಗ್ಗ ಜಿಲ್ಲೆ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸಲ್ಲಿಸಿದ ವರದಿಯಲ್ಲಿ ಶ್ರೀ ಆರ್.ಎಸ್.ಪರಮೇಶ್ವರಪ್ಪ, ಬಿನ್ ಲೇಟ್ ಶಿವಪ್ಪ, ಅಭಿವೃದ್ದಿ ಅಧಿಕಾರಿ, ಪ್ರಭಾರ ಜಿಲ್ಲಾ ವ್ಯವಸ್ಥಾಪಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ದಿ ನಿಗಮ, ಶಿವಮೊಗ್ಗ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ, ಶ್ರೀ ಹೆಚ್.ಎಸ್.ಜನಾರ್ಧನ ಬಿನ್ ಶ್ರೀನಿವಾಸ, ವ್ಯವಸಾಯ ವೃತ್ತಿ, ವಾಸ ಹೊಸಗುಂದ ಗ್ರಾಮ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆಯನ್ನು ಕೈಕೊಂಡಿರುತ್ತಾರೆ.

2. **ದೂರಿನ ಸಂಕ್ಷಿಪ್ತ ಸಾರಾಂಶ:-**

i) ದೂರುದಾರರು 2015-16 ನೇ ಸಾಲಿನಲ್ಲಿ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ಕೊಳವೆ ಬಾವಿಗಾಗಿ ಅರ್ಜಿ ಸಲ್ಲಿಸಿಕೊಂಡಿದ್ದು, ಸಾಗರ ತಾಲ್ಲೂಕು ವಿಧಾನಸಭಾ ಕ್ಷೇತ್ರದ ಶಾಸಕರು ಇವರನ್ನು ಗಂಗಾ ಕಲ್ಯಾಣ ಯೋಜನೆಯ ಕೊಳವೆ ಬಾವಿಯ ಫಲಾನುಭವಿಯಾಗಿ ಆಯ್ಕೆ ಮಾಡಿರುತ್ತಾರೆ. ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು ರವರು ದಿನಾಂಕ: 06-08-2016 ರಂದು, ದೂರುದಾರರಿಗೆ ಪತ್ರ ಮುಖೇನ 2 ಲಕ್ಷ ವೆಚ್ಚದಲ್ಲಿ ಕೊಳವೆಬಾವಿ ಮಂಜೂರು

ಮಾಡಿ, ಅದರಲ್ಲಿ 1.50 ಲಕ್ಷ ಸಹಾಯಧನ ಹಾಗೂ 50 ಸಾವಿರ ನಿಗಮದಿಂದ ಶೇ: 4 ರಷ್ಟು ಬಡ್ಡಿ ದರದಲ್ಲಿ ಸಾಲವನ್ನು ಮಂಜೂರು ಮಾಡಿರುವುದಾಗಿ, ಜಿಲ್ಲಾ ವ್ಯವಸ್ಥಾಪಕರನ್ನು ಸಂಪರ್ಕಿಸುವಂತೆ ತಿಳಿಸಿರುತ್ತಾರೆ. ಅದರಂತೆ ದೂರುದಾರರು, ಎದುರುದಾರರ ಕಚೇರಿಗೆ ಹೋಗಿ, ಎದುರುದಾರರನ್ನು ಭೇಟಿ ಮಾಡಿದಾಗ, ಸದರಿಯವರು ಆಯ್ತು ಮಾಡಿಕೊಡುತ್ತೇನೆಂದು ಹೇಳಿ ದಿನಗಳನ್ನು ಮುಂದೂಡುತ್ತಾ ಬಂದಿರುತ್ತಾರೆ. ದೂರುದಾರರು ದಿನಾಂಕ: 13-7-2017ರ ಮುಂಚೆ 1 ತಿಂಗಳ ಹಿಂದೆ ಕಚೇರಿಗೆ ಹೋಗಿ, ಎದುರುದಾರರನ್ನು ಭೇಟಿ ಮಾಡಿ ಮಂಜೂರಾಗಿರುವ ಗಂಗಾ ಕಲ್ಯಾಣ ಯೋಜನೆಯ ಕೊಳವೆ ಬಾವಿ ಕೊರೆಯುವ ಬಗ್ಗೆ ಕೇಳಿದಾಗ, ಎದುರುದಾರರು 15000/- ರೂ ಲಂಚವನ್ನು ಕೊಡುವಂತೆ ಕೇಳಿರುತ್ತಾರೆ. ದೂರುದಾರರು ಅಷ್ಟು ಆಗಲ್ಲಾ ಅಂತ ಕೇಳಿಕೊಂಡಿದ್ದು, ಹೊಸೂರು ಗ್ರಾಮದ ಯೋಗೇಂದ್ರ 15000/- ರೂ ಕೊಟ್ಟಿದ್ದಾನೆ, ಅಷ್ಟು ಕೊಡುವಂತೆ ಹೇಳಿರುತ್ತಾರೆ. ದೂರುದಾರರು ಅಡ್ಜೆಸ್ಟ್ ಮಾಡಿಕೊಂಡು ಬರ್ತಿನಿ ಅಂತ ಹೇಳಿ ಬಂದಿರುತ್ತಾರೆ. ಎದುರುದಾರರು ಹೇಳಿದಷ್ಟು ಹಣ ಹೊಂದಿಸಿಕೊಳ್ಳಲು ಆಗದೇ ಇರುವುದರಿಂದ ದಿನಾಂಕ: 13-07-2017 ರಂದು ಎದುರುದಾರವರ ಮೊಬೈಲ್ ನಂ: 9036397431 ಗೆ ದೂರುದಾರರು ತನ್ನ ಮೊಬೈಲ್ ನಂ: 9945785590 ನಿಂದ ಕರೆಮಾಡಿ "ನೀವು ಹೇಳಿದಷ್ಟು ಆಗಿಲ್ಲಾ ಸಾರ್, ಕಡಿಮೆ ಇದೆ 10,000/- ತರ್ಲಾ ಸಾರ್ ಅಂತ ಹೇಳಿದ್ದು, ಎದುರುದಾರರು ಆಯ್ತು, ಪೋನ್‌ನಲ್ಲಿ ಮಾಡನಾಡುವುದು ಬೇಡ ಬಾ ಅಂತ ಹೇಳಿರುತ್ತಾರೆ. ಈ ಬಗ್ಗೆ ದೂರುದಾರರು ತನ್ನ ಮೊಬೈಲ್ ನಲ್ಲಿ ಸದರಿ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಂಡಿರುತ್ತಾರೆ. ದೂರುದಾರರು ಲಂಚದ ಹಣ ಕೊಡಲು ಇಷ್ಟವಿಲ್ಲದಿದ್ದರಿಂದ ದಿನಾಂಕ: 13-07-2017ರಂದು ದೂರನ್ನು ಪೊಲೀಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಶಿವಮೊಗ್ಗ, ಇವರಿಗೆ ಕೊಟ್ಟಿರುತ್ತಾರೆ. ದೂರುದಾರರು ದೂರಿನ ಜೊತೆ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟ ಬಗ್ಗೆ ಸಂಭಾಷಣೆ ಇದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ಅದರಂತೆ, ಸದರಿ ಮೊ.ಸಂಖ್ಯೆ: 11/2017ರಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ಕಲಂ 7ರ ಅಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

ii) ದಿನಾಂಕ: 13-07-2017ಂದು, ತನಿಖಾಧಿಕಾರಿಯವರು ಸರ್ಕಾರಿ ಪಂಚರಾದ ಶ್ರೀ ಆರ್.ನರಸಿಂಹ ಪಂಚ-1, ಶ್ರೀ ಹೆಚ್.ಎನ್.ಉಮೇಶ್ ಪಂಚ-2, ಇವರನ್ನು ಬರಮಾಡಿಕೊಂಡು, ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ 10,000/- (ಹಣದ ಡಿನಾಮಿನೇಷನ್ 2000/- x 5) ಗಳನ್ನು ಹಾಗೂ ಲಂಚದ ಹಣಕ್ಕೆ ಬೇಡಿಕೆ ಇದ್ದ ಸಂಭಾಷಣೆ ದಾಖಲಾಗಿದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ಪಂಚರು ಹಣದ ಮೌಲ್ಯ ಮತ್ತು ನಂಬರುಗಳನ್ನು ಹಾಳೆಯಲ್ಲಿ ಪರಿಶೀಲಿಸಿ ದಾಖಲಿಸಿರುತ್ತಾರೆ. ನಂತರ ತನಿಖಾಧಿಕಾರಿಯವರ ಸೂಚನೆ ಮೇರೆಗೆ ಪಂಚ-2 ರವರು, ಪೊಲೀಸ್ ಸಿಬ್ಬಂದಿಯಿಂದ ಫಿನಾಪ್ತಿಲೀನ್ ಪೌಡರ್ ಲೇಪಿಸಿದ 10,000/- ರೂ.ಗಳ ಹಣವನ್ನು ಎಣಿಸಿ, ದೂರುದಾರರ ಧರಿಸಿದ ಶರ್ಟಿನ ಮುಂಬಾಗದ ಎಡಭಾಗದ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿಯವರು ದೂರುದಾರರಿಗೆ ನಿಗದಿತ ಸೂಚನೆಯನ್ನು ನೀಡಿ, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದಾಗ, ದೂರುದಾರರು ತನ್ನ ಕೈಯಿಂದ ತನ್ನ ಮುಖವನ್ನು ಒರೆಸಿಕೊಳ್ಳುವುದರ ಮೂಲಕ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ ಹಾಗೂ ತನ್ನ ಮೊಬೈಲ್‌ನ್ನು ಆನ್ ಮಾಡಿಕೊಂಡು ಹೋಗಬೇಕೆಂದು ತಿಳಿಸಿರುತ್ತಾರೆ ಮತ್ತು ನೆರಳು ಸಾಕ್ಷಿ ಪಂಚ-1 ಶ್ರೀ ನರಸಿಂಹ ಇವರು ದೂರುದಾರರ ಜೊತೆಗೆ ಇದ್ದು, ಘಟನೆಯನ್ನು ಗಮನಿಸಬೇಕೆಂದು ತಿಳಿಸಿರುತ್ತಾರೆ ಈ

ಸಂಬಂಧವಾಗಿ ತನಿಖಾಧಿಕಾರಿ ವಹಿಸುವಿಕೆ ಪಂಚನಾಮೆಯನ್ನು ಪಂಚರ ಸಮಕ್ಷಮ 03.30 ರಿಂದ ಮಧ್ಯಾಹ್ನ 05.00 ಘಂಟೆಯವರೆಗೆ ಬರೆದಿರುತ್ತಾರೆ.

iii) ಅದೇ ದಿನ ಅಂದರೆ, ದಿನಾಂಕ: 13-07-2017 ರಂದು ತನಿಖಾಧಿಕಾರಿ, ಸಿಬ್ಬಂದಿ, ದೂರುದಾರರು, ಇವರುಗಳು ಎದುರುದಾರರು ಕರ್ತವ್ಯ ನಿರ್ವಹಿಸುವ ಕಚೇರಿ ಹತ್ತಿರ ಸಂಜೆ 5.30 ಕ್ಕೆ ಬಂದಿರುತ್ತಾರೆ. ದೂರುದಾರರು, ಪಂಚ-1 ರವರ ಜೊತೆ ಎದುರುದಾರರನ್ನು ಭೇಟಿ ಮಾಡಿ, ಸ್ವಲ್ಪ ಸಮಯದ ನಂತರ ದೂರುದಾರರು ಮತ್ತು ಎದುರುದಾರರು ಕಚೇರಿಯಿಂದ ಕೆಳಗೆ ಇಳಿದ್ದು ಬಂದು, ಹೋಟೆಲ್ ನಕ್ಷತ್ರಕ್ಕೆ ಹೋಗಿ ಟೀ ಕುಡಿದು, ಹೋಟೆಲ್ ನಿಂದ ಹೊರಬಂದು ಎದುರುದಾರರ ಕಾರಿನ ಬಳಿ ಬಂದಿರುತ್ತಾರೆ. ನಂತರ, ಎದುರುದಾರರು ಕಚೇರಿಯಲ್ಲಿ ಡ್ರೈವರ್‌ನ್ನು ಕರೆದುಕೊಂಡು ಬರುವಂತೆ ಎದುರುದಾರರಿಗೆ ತಿಳಿಸಿ, ಡ್ರೈವರ್ ಬಂದ ನಂತರ, ಎದುರುದಾರರು ದೂರುದಾರರನ್ನು ತನ್ನ ಕಾರಿನಲ್ಲಿ ಕೂರಿಸಿಕೊಂಡು, ಕಾರಿನಲ್ಲಿ ಲಂಚದ ಹಣಕ್ಕಾಗಿ ಸಂಜ್ಞೆ ಮಾಡಿದಾಗ, ದೂರುದಾರರು ತಮ್ಮ ಬಳಿ ಇದ್ದ ಪಿನಾಪ್ತಲಿನ್ ಪೌಡರ್ ಲೇಪಿತ ಹಣವನ್ನು ಎದುರುದಾರರಿಗೆ ನೀಡಿದ್ದು, ಅವರು ತಮ್ಮ ಬಲಗೈಯಿಂದ ಪಡೆದು, ಹಣವನ್ನು ಎಡಗೈ ಮೂಲಕ ತನ್ನ ಪ್ಯಾಂಟಿನ ಮುಂಬಾಗದ ಎಡ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ದೂರುದಾರರು ನಿಗದಿತ ಸೂಚನೆಯನ್ನು ತನಿಖಾಧಿಕಾರಿಯವರಿಗೆ ನೀಡಿದಾಗ, ತನಿಖಾಧಿಕಾರಿ ವಾಹನ ಎದುರುದಾರರ ವಾಹನದ ಹಿಂದೆ ಹೊರಟ್ಟಿರುತ್ತದೆ. ನಂತರ ಎದುರುದಾರರು ದೂರುದಾರರನ್ನು ಮೆಗ್ಗಾನ್ ಆಸ್ಪತ್ರೆಯ ಎದುರು ಕಾರಿನಿಂದ ಇಳಿಸಿ ಹೋದರು. ಆಗ ಸಂಜೆ 6.30 ಆಗಿತ್ತು. ನಂತರ ಎದುರುದಾರರು ತಮ್ಮ ಕಾರನ್ನು ಸಾವರ್ ಲೈನ್ ಕಡೆ ಹೋಗಿ ಅಲ್ಲಿಂದ ಎಲ್.ಎಲ್.ಆರ್ ರಸ್ತೆ ಮೂಲಕ ಗಾರ್ಡನ್ ಏರಿಯ 1ನೇ ಕ್ರಾಸ್ ನಲ್ಲಿರುವ ಪ್ರಿಯದರ್ಶಿನಿ ಬಟ್ಟೆ ಅಂಗಡಿ ಹತ್ತಿರ ನಿಲ್ಲಿಸಿ, 10-15 ನಿಮಿಷ ನಂತರ ಎದುರುದಾರರು ತಮ್ಮ ಕಾರನ್ನು ಗೋಪಿ ಸರ್ಕಲ್, ನಂಜಪ್ಪ ಆಸ್ಪತ್ರೆ ಎ.ಎನ್.ಕೆ ರಸ್ತೆ, 4ನೇ ಕ್ರಾಸ್ ಮೂಲಕ ತಮ್ಮ ಕಚೇರಿ ಹತ್ತಿರ ಬಂದು ನಿಲ್ಲಿಸಿರುತ್ತಾರೆ. ನಂತರ, ದೂರುದಾರರು ಕಚೇರಿಯ ಕೊಠಡಿಯಲ್ಲಿದ್ದ ಎದುರುದಾರರನ್ನು ತನಿಖಾಧಿಕಾರಿಗೆ ತೋರಿಸಿಕೊಟ್ಟಿರುತ್ತಾರೆ. ಆಗ ಸಮಯ ಸಂಜೆ 7.00 ಗಂಟೆಯಾಗಿರುತ್ತದೆ.

iv) ನಂತರ, ತನಿಖಾಧಿಕಾರಿಯವರು ಎದುರುದಾರರನ್ನು ಪರಿಚಯಿಸಿಕೊಂಡು ಪ್ರಕರಣ ದಾಖಲಾಗಿರುವುದರ ಬಗ್ಗೆ ತಿಳಿಸಿ, ತನಿಖೆಯನ್ನು ಪ್ರಾರಂಭಿಸಿ, ಎದುರುದಾರರ ಎರಡೂ ಕೈಬೆರಳುಗಳನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ ತಿಳಿಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ನಂತರ, ತನಿಖಾಧಿಕಾರಿಯವರ ಸೂಚನೆ ಮೇರೆಗೆ, ಎದುರುದಾರರು ಹಾಜರುಪಡಿಸಿದ ಲಂಚದ ಹಣವನ್ನು ಪಂಚರು ಪರಿಶೀಲಿಸಿ, ಖಾತ್ರಿಪಡಿಸಿಕೊಂಡಿರುತ್ತಾರೆ. ನಂತರ ಎದುರುದಾರರು ಲಂಚದ ಹಣ ಇಟ್ಟಿದ ಪ್ಯಾಂಟಿನ ಎಡಭಾಗದ ಜೇಬಿನ ಒಳಭಾಗವನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ ತಿಳಿಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ನಂತರ, ಪ್ಯಾಂಟನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಈ ಸಂಬಂಧವಾಗಿ ಟ್ರ್ಯಾಪ್ ಪಂಚನಾಮೆಯನ್ನು ದಿನಾಂಕ: 13/7/2017 ರಂದು ಸಂಜೆ 7.00 ಗಂಟೆಯಿಂದ ರಾತ್ರಿ: 10.30 ರವರೆಗೆ ಬರೆದಿರುತ್ತದೆ. ಸದರಿ ಘಟನಾವಳಿ ಬಗ್ಗೆ ಕಾಲಕಾಲಕ್ಕೆ ಪೊಟೋಗಳನ್ನು ತೆಗೆದಿರುತ್ತಾರೆ. ನಂತರ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ.

v) ನಂತರ, ತನಿಖಾಧಿಕಾರಿಯವರು ಎದುರುದಾರರನ್ನು ವಿಚಾರಿಸಿದಾಗ ಆತನು ತನ್ನ ಸಮಜಾಯಿಷಿಯನ್ನು "ದಿನಾಂಕ: 13-07-2017 ರಂದು ಕಚೇರಿಯಲ್ಲಿ ಕೆಲಸ ನಿರ್ವಹಿಸುತ್ತಿದೆ.

ಸಾಯಂಕಾಲ ಸಮಯದಲ್ಲಿ ಶ್ರೀ ಜರ್ನಾರ್ಧನ ಹೊಸಗುಂದ ಗ್ರಾಮ, ಸಾಗರ ತಾಲ್ಲೂಕು ರವರು ಕಚೇರಿಗೆ ಬಂದು ಅವರಿಗೆ ಮಂಜೂರಾದ ಕೊಳವೆಬಾವಿಯನ್ನು ಕೊರೆಯಿಸಿಕೊಡಲು ವಿನಂತಿಸಿಕೊಂಡರು. ಆ ಸಮಯದಲ್ಲಿ ನಾನು ಅವರಿಗೆ ಸಾಗರ ತಾಲ್ಲೂಕಿಗೆ ಮಂಜೂರಾದ ಎಲ್ಲಾ ಕೊಳವೆ ಬಾವಿಗಳನ್ನು ಕೊರೆಯಿಸುತ್ತಾ ಬಂದಿದ್ದು, ಕೊನೆಯಲ್ಲಿ ಉಳಿದಿದ್ದ ಶ್ರೀ ಜನಾರ್ಧನ್ ಮತ್ತು ಮಂಜಪ್ಪ ನಂದಿಕೆರೆ ಇವರ ಕೊಳವೆ ಬಾವಿಗಳನ್ನು ಕೊರೆಯುವಷ್ಟರಲ್ಲಿ ಮಳೆ ಬಹಳಷ್ಟು ಬಂದಿದ್ದು, ಅವರ ಜಮೀನಿನಲ್ಲಿ ಡ್ರಿಲ್ಲಿಂಗ್ ಗಾಡಿಗಳು ಇಳಿಯದಿದ್ದರಿಂದ ಕೊರೆಯಲಾಗಲಿಲ್ಲವೆಂದು ತಿಳಿಸಲಾಯಿತು. ಆ ಸಂದರ್ಭದಲ್ಲಿ ಸದರಿ ಜನಾರ್ಧನ ರವರು ಏನೂ ತಿಳಿಸದೇ ಬೇಗನೆ ಕೊರೆಯಿಸಿಕೊಡಬೇಕೆಂದು ಜೇಬಿಗೆ ಹಣವನ್ನು ತುರಿಕಿದರು. ಈ ಸಂಬಂಧಿಸಿದಂತೆ ನಾನು ಅವರಿಗೆ ಯಾವುದೇ ಒತ್ತಾಯ ಮಾಡಿರಲಿಲ್ಲ. ಜೊತೆಗೆ ಹಣ ನೀಡಲು ತಿಳಿಸಿರಲಿಲ್ಲವೆಂದು ತಮ್ಮಲ್ಲಿ ವಿನಂತಿಸುತ್ತಾ ಇದರಲ್ಲಿ ಬೇರೆಯವರು ಏನಾದರು ಕೈವಾಡ ಇದೆ ಎಂಬ ಭಾವನೆ ಬರುತ್ತದೆ. ಎಂದು ಅವರು ನನ್ನನ್ನು ತಪ್ಪಿತಸ್ಥನನ್ನಾಗಿ ಮಾಡಬೇಕೆಂದು ಮಾಡಿದ್ದಾರೆಂಬುದನ್ನು ಬಿಟ್ಟರೆ ಬೇರೆ ಏನು ಇರುವುದಿಲ್ಲ. ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಾ ಇದರಲ್ಲಿ ನನ್ನದೇನು ತಪ್ಪಿಲ್ಲವೆಂಬುದನ್ನು ತಮ್ಮಲ್ಲಿ ತಿಳಿಸುತ್ತಿದ್ದೇನೆ". ತನಿಖಾಧಿಕಾರಿಯವರು ಎದುರುದಾರರ ಪ್ರತಿರಕ್ಷಣೆ ಹೇಳಿಕೆ ಬಗ್ಗೆ, ದೂರುದಾರರು ಕೇಳಲಾಗಿ ಸದರಿ ಎದುರುದಾರರು ಬರೆದುಕೊಟ್ಟ ಪ್ರತಿರಕ್ಷಣಾ ಹೇಳಿಕೆ ಸುಳ್ಳೆಂದು ಹೇಳಿರುತ್ತಾರೆ. ಎದುರುದಾರರು ಪಿನಾಪ್ತಿಲಿನ್ ಪೌಡರ್ ಲೇಪಿತ ಲಂಚದ ಹಣವನ್ನು ಸ್ವೀಕರಿಸಿದ ಬಗ್ಗೆ ರಾಸಾಯನಿಕ ವಿಶ್ಲೇಷಣಾ ವರದಿಯಿಂದ ದೃಡಪಟ್ಟಿದೆ.

vi). ಎದುರುದಾರರಿಗೆ ದಿ: 31/08/2021ರಂದು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದೆ. ಎದುರುದಾರರು ತನ್ನ ವಿವರಣೆಯನ್ನು ದಿ: 27/09/2021 ರಂದು ಸಲ್ಲಿಸಿರುತ್ತಾರೆ. ಸದರಿ ವಿವರಣೆಯನ್ನು ಪರಿಶೀಲಿಸಲಾಗಿ, ವಿವರಣೆಯ ಪುಟ 3ರ, ಕಂಡಿಕೆ 4 ರಿಂದ ಪುಟ 5 ಕಂಡಿಕೆ 2 ರಲ್ಲಿ ಕರಡು ಪರಿವೀಕ್ಷಣಾ ಟಿಪ್ಪಣಿಯ ಅಂಶಗಳನ್ನು ಸಾರಸಗಟವಾಗಿ ಅಲ್ಲಗಳೆದಿರುತ್ತಾರೆ ಹಾಗೂ ವಿವರಣೆಯ ಪುಟ 5 ಕಂಡಿಕೆ 3ರ ತಮ್ಮ ವಿವರಣೆಯಲ್ಲಿ ಉಲ್ಲೇಖ (3)(4)(5) ರ ಕೋರಿಕೆಯಂತೆ ಉಲ್ಲೇಖ (6) ರ ನಿಗಮದ ಪತ್ರದಲ್ಲಿ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಯನ್ನು ನಡೆಸಲು ವಿಚಾರಣಾಧಿಕಾರಿಯಾಗಿ ಟಿ.ಶ್ರೀನಿವಾಸ ಕುಮಾರ್ ಮತ್ತು ಮಂಡನಾಧಿಕಾರಿಯಾಗಿ ಬಿ.ಎನ್. ಕೃಷ್ಣಕುಮಾರ್ ರವರನ್ನು ನೇಮಕ ಮಾಡಲಾಗಿದೆ. ಇಲಾಖಾ ವಿಚಾರಣಾ ಕಾರ್ಯ ಪ್ರಗತಿಯಲ್ಲಿದೆ ಎಂದು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ,

vii) ಎದುರುದಾರರು ತಮ್ಮ ವಿವರಣೆಯ ಪುಟ 1 ರಲ್ಲಿ ದೂರುದಾರರನ್ನು 2015-16ನೇ ಸಾಲಿನಲ್ಲಿ ಗಂಗಕಲ್ಯಾಣ ಯೋಜನೆ ಅಡಿಯಲ್ಲಿ ಕೊಳವೆ ಬಾವಿಗಾಗಿ ಅರ್ಜಿ ಸಲ್ಲಿಸಿ, ಆ ಸಂಬಂಧ ವಿಧಾನಸಭಾ ಕ್ಷೇತ್ರದ ಶಾಸಕರ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡಲಾಗಿತ್ತು. ದಿ: 6/8/2016 ರಂದು ದೂರುದಾರರಿಗೆ ಪತ್ರದ ಮೂಲಕ ಯೋಜನೆ ನಿಗದಿಪಡಿಸಿದ 1.50 ಲಕ್ಷ ಸಹಾಯ ಧನ ಹಾಗೂ 50 ಸಾವಿರ ಸಾಲದ ಮೊತ್ತ ಶೇಕಡ 4 ರಷ್ಟು ಬಡ್ಡಿ ಧರದಲ್ಲಿ ಮಂಜೂರು ಮಾಡಿರುವುದಾಗಿ ತಿಳಿಸಿ, ಈ ಸಂಬಂಧ ಜಿಲ್ಲಾ ವ್ಯವಸ್ಥಾಪಕರನ್ನು ಸಂಪರ್ಕಿಸುವಂತೆ ತಿಳಿಸಲಾಗಿತ್ತು.

viii) ಮುಂದುವರೆದು, ಗಂಗಾಕಲ್ಯಾಣ ಯೋಜನೆಯಲ್ಲಿ ಮಂಜೂರು ಮಾಡಿದ ಕೊಳವೆಬಾವಿಗಳನ್ನು ಕೊರೆಯಲು ಮತ್ತು ಪಂಪ್‌ಸೆಟ್‌ಗಳನ್ನು ಅಳವಡಿಸಲು ಪ್ರತ್ಯೇಕವಾಗಿ ಆನ್

ಲೈನ್ ಮೂಲಕ ಟೆಂಡರ್‌ಗಳನ್ನು ಕರೆದು, ಟೆಂಡರ್ ನಲ್ಲಿ ಕಡಿಮೆ ದರ ನಮೂದಿಸಿದ ಡ್ರಿಲಿಂಗ್ ಏಜೆನ್ಸಿ ಮತ್ತು ಪಂಪ್ ಸೆಟ್ ಸರಬರಾಜುದಾರರಿಗೆ ಕಾರ್ಯಾದೇಶ ನೀಡುವ ಪ್ರಕ್ರಿಯೆ ಇದ್ದು, ಮಾನ್ಯ ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ರವರ ಅಧ್ಯಕ್ಷತೆಯಲ್ಲಿ ನಡೆಯುವ ಟೆಂಡರ್ ಪ್ರಕ್ರಿಯೆಯಲ್ಲಿ ಸದಸ್ಯ ಕಾರ್ಯದರ್ಶಿಗಳಾಗಿ ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ದಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಇರುತ್ತಾರೆ. ಉಳಿದ ಕರ್ನಾಟಕ ವಾಲ್ಮೀಕಿ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಸದರಿ ಸಮಿತಿಯ ಸದಸ್ಯರಾಗಿರುತ್ತಾರೆ. ಅವರವರ ನಿಗಮಗಳಿಗೆ ವರ್ಷವಾರು ನಿಗದಿಪಡಿಸಿರುವ ಗುರಿಯಂತೆ ಕೊಳವೆ ಬಾವಿಗಳನ್ನು ಟೆಂಡರ್ ನಲ್ಲಿ ಭಾಗವಹಿಸಿ ಅತೀ ಕಡಿಮೆ ದರ ನಮೂದಿಸಿ ಆಯ್ಕೆಯಾದ ಡ್ರಿಲಿಂಗ್ ಏಜೆನ್ಸಿಯವರಿಗೆ ಆಯ್ಕೆಯಾದ ಫಲಾನುಭವಿಗಳ ಪಟ್ಟಿಯ ಕಾರ್ಯಾದೇಶ ನೀಡಿ ಪ್ರಗತಿ ಸಾಧಿಸುವ ಕ್ರಮವನ್ನು ನೋಡಿಕೊಳ್ಳುವ ಆಯಾಯ ನಿಗಮಗಳ ಜಿಲ್ಲಾ ವ್ಯವಸ್ಥಾಪಕರ ಜವಾಬ್ದಾರಿಯಾಗಿರುತ್ತದೆ.

ix) ಅದರಂತೆ ಟೆಂಡರ್ ನಲ್ಲಿ ಕಡಿಮೆ ದರ ನಮೂದಿಸಿ ಆಯ್ಕೆಯಾದ ಮೆ: ರವಿಬೋರ್‌ವೆಲ್ಸ್ ಕಡೂರು ರವರಿಗೆ ದೂರುದಾರರ ಹೆಸರನ್ನು ಒಳಗೊಂಡಂತೆ ಇರುವ ಫಲಾನುಭವಿಗಳ ಪಟ್ಟಿಯನ್ನು ಸಹ ಕೊಳವೆಬಾವಿ ಕೊರೆಯಲು ನೀಡಲಾಗಿರುತ್ತದೆ. ಈ ಸಂಬಂಧಿಸಿದಂತೆ, ಸದರಿ ಡ್ರಿಲಿಂಗ್ ಏಜೆನ್ಸಿಯವರು ಕ್ರಮವಾಗಿ ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ದಿ ನಿಗಮ, ಕರ್ನಾಟಕ ವಾಲ್ಮೀಕಿ ಅಭಿವೃದ್ಧಿ ನಿಗಮ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ದಿ ನಿಗಮ ಹಾಗೂ ಡಿ.ದೇವರಾಜು ಅರಸು ಅಭಿವೃದ್ದಿ ನಿಗಮ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ದಿ ನಿಗಮ ಹಾಗೂ ಡಿ.ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳಲ್ಲಿ ಆಯ್ಕೆಯಾದ ಫಲಾನುಭವಿಗಳ ಜಮೀನಿನಲ್ಲಿ ಕೊಳವೆ ಬಾವಿಗಳನ್ನು ಕೊರೆಯುವ ಜವಾಬ್ದಾರಿ ಸದರಿ ಡ್ರಿಲಿಂಗ್ ಏಜೆನ್ಸಿಯವರ ಜವಾಬ್ದಾರಿಯಾಗಿರುತ್ತದೆ. ಸದರಿ ಕೊಳವೆ ಬಾವಿಗಳನ್ನ ಕೊರೆದ ಬಿಲ್ಲುಗಳ ಮೊತ್ತವನ್ನ ಬೆಂಗಳೂರಿನ ಕೇಂದ್ರ ಕಛೇರಿಯಲ್ಲಿ ಪರಿಶೀಲಿಸಿ ಬಿಲ್ಲುಗಳ ಮೊತ್ತವನ್ನು ಸಂಬಂಧಿಸಿದ ಡ್ರಿಲಿಂಗ್ ಏಜೆನ್ಸಿಯವರಿಗೆ ಬಿಡುಗಡೆಗೊಳಿಸುವ ಪದ್ಧತಿ ಅಸ್ಥಿತ್ವದಲ್ಲಿದೆ. ಈ ಬಗ್ಗೆ ಜಿಲ್ಲಾ ಅಧಿಕಾರಿಗಳ ಕಚೇರಿಯಲ್ಲಿ ಯಾವುದೇ ಹಣಕಾಸಿನ ವರ್ಗಾವಣೆ ಇರುವುದಿಲ್ಲವೆಂಬುದನ್ನು ದೂರುದಾರರು ಪೊಲೀಸ್ ಇನ್ಸ್‌ಪೆಕ್ಟರ್ ಭ್ರಷ್ಟಚಾರ ನಿಗ್ರಹದಳ, ಪೊಲೀಸ್ ಠಾಣೆ, ಶಿವಮೊಗ್ಗಕ್ಕೆ ಸಲ್ಲಿಸಿದೆ.

x) ತದನಂತರ ಯೋಜನೆಯಲ್ಲಿ ಆಯ್ಕೆಯಾಗಿ ಅನುಮೋದನೆಗೊಂಡ ಫಲಾನುಭವಿಗಳ ಜಮೀನಿನಲ್ಲಿ ಕೊಳವೆ ಬಾವಿಯನ್ನು ಕೊರೆಯಲು ಟೆಂಡರ್ ನಲ್ಲಿ ಅತೀ ಕಡಿಮೆ ದರ ನಮೂದಿಸಿ ಆಯ್ಕೆಯಾದ ಮೆ: ರವಿ ಬೋರ್ ವೆಲ್ಸ್ ಕಡೂರು ರವರಿಗೆ ಕಾರ್ಯಾದೇಶ ನೀಡಿ, ಫಲಾನುಭವಿಗಳು ಅರ್ಜಿಯಲ್ಲಿ ನೀಡಿದ ಜಮೀನಿನ ಸರ್ವೆ ನಂಬರುಗಳಲ್ಲಿ ಕೊಳವೆ ಬಾವಿಯನ್ನು ಕೊರೆಯಲು ನಾನು ಮತ್ತು ಡ್ರಿಲಿಂಗ್ ಏಜೆನ್ಸಿಯವರು ಜಂಟಿಯಾಗಿ ದೂರುದಾರರ ಜಮೀನಿನಲ್ಲಿ ಕೊಳವೆಬಾವಿ ಕೊರೆಯುವ ಸ್ಥಳವನ್ನು ದೂರುದಾರರ ಸಮ್ಮುಖದಲ್ಲಿ ಸ್ಥಳ ಪರಿಶೀಲಿಸಿಕೊಂಡು ಬರಲಾಗಿದೆ. ಅದರಂತೆ ಡ್ರಿಲಿಂಗ್ ಏಜೆನ್ಸಿಯವರು 4 ನಿಗಮಗಳ ಫಲಾನುಭವಿಗಳ ಜಮೀನಿನಲ್ಲಿ ಕೊಳವೆಬಾವಿಗಳನ್ನು ಕೊರೆದು ಪ್ರಗತಿ ಸಾಧಿಸುವ ಪ್ರಕ್ರಿಯೆ ನಡೆಸಿರುತ್ತಾರೆ. ದೂರುದಾರರ ಜಮೀನಿನಲ್ಲಿ ಡ್ರಿಲಿಂಗ್ ಏಜೆನ್ಸಿಯವರು ಕೊಳವೆಬಾವಿಗಳನ್ನು ಕೊರೆಯಲು 2 ಬಾರಿ ಭೇಟಿ ನೀಡಿದಾಗಲೂ ಮಳೆ ಬಂದಿರುವುದರಿಂದ, ತುಂಬಾ ಬಾರವಾದ ಕೊಳವೆಬಾವಿ ಕೊರೆಯುವ ಯಂತ್ರವು ಜಮೀನಿನಲ್ಲಿ ಇಳಿಯಲಾಗದೇ ಇರುವುದರಿಂದ, ಕೊಳವೆ ಬಾವಿಯನ್ನು ಕೊರೆಯಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಪರಿಸ್ಥಿತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ದೂರುದಾರರು ಅವರ ಕಲ್ಪನೆಗೆ ತೋಚಿದಂತೆ ಒಬ್ಬ ನಿಷ್ಠಾವಂತ ಅಧಿಕಾರಿಗೆ ತೊಂದರೆ ಕೊಡಲು

ಅನಾಪೇಕ್ಷಿತ ವಿಷಯಗಳನ್ನು ಹುಟ್ಟುಹಾಕಿ ತೊಂದರೆಗೆ ಒಳಪಡಿಸಿರುತ್ತಾರೆಂದು ತಿಳಿಸಿರುತ್ತಾರೆ. ಆದುದರಿಂದ, ಎದುರುದಾರರು ನೀಡಿರುವ ವಿವರಣೆಗಳ ಮೇಲೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡು ಬಂದಿರುವುದಿಲ್ಲ.

3. ಸಾಕ್ಷಿದಾರರ ಹೇಳಿಕೆಗಳು, ದೂರು, ಅರ್ಜಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆಗಳು ಮತ್ತು ಇತರೆ ಅಂಶಗಳು ಎದುರುದಾರರ ದುರ್ನಡತೆಯನ್ನು ತೋರಿಸುತ್ತದೆ.

4. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು, ದಾಖಲಾತಿಗಳನ್ನು ಪರಿಶೀಲಿಸಿದಾಗ ಹಾಗೂ ಎದುರುದಾರರು ತಮ್ಮ ವಿರುದ್ಧ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ ಸಮಾದಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

6. ಆದುದರಿಂದ, ಎದುರುದಾರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯವಳಿ 1966 ರ (ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ನಡತೆ) 2021), ನಿಯಮ 3(1) (i) ರಿಂದ (iii) ರ ಉಲ್ಲಂಘನೆಗಾಗಿ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ.

7. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

12/11/24

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು-1
ಕರ್ನಾಟಕ ರಾಜ್ಯ, ಬೆಂಗಳೂರು